ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮುಂಡರಗಿ

| | | | | |
|---|---|---|---|---|
| | ಓ ಎಸ್ ನಂ. 35/2020 | | | |
| | ವಾದಿ | 1 | ಪಿ.ಡಬ್ಲೂ಼ | 1 |
| | ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 04.09.2025 | | | |
| ಸಾಕ್ಷಿದಾರರ ಹೆಸರುಃ | ಮಹಾಲಿಂಗಪ್ಪ ಕೊಂಚಿಗೇರಿ | | | |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ.ಎಮ್.ಎಸ್.ಬಿ. ವಕೀಲರಿಂದಃ**

1. ನಮ್ಮ ಊರು ಅನ್ನದಾನೇಶ್ವರ ದೇವಮಂದಿರ ಮಠದ ಧಾರ್ಮಿಕ ಕ್ಷೇತ್ರವಾಗಿದೆ ಎಂದರೆ ಸರಿ ಅಲ್ಲ. ಮಣಕವಾಡ ಮಠಕ್ಕೆ ನಮ್ಮ ಊರಿನ ಗ್ರಾಮಸ್ಥರು ನಡೆದುಕೊಳ್ಳುತ್ತಾರೆ ಎಂದರೆ ಸರಿ. ಸದರಿ ಮಠದ ಸ್ವಾಮಿಯ ಹುಟ್ಟೂರು ನಮ್ಮೂರೇ ಎಂದರೆ ಸರಿ. ಸದರಿ ಮಠದ ಸ್ವಾಮಿ ಆದ ಮೃತ್ಯುಂಜಯ ಇವರು ಅನ್ನದಾನೇಶ್ವರ ದೇವಮಂದಿರ ಮಠ, ಮಣಕವಾಡ ಇದರ ಸ್ವಾಮಿಗಳಾಗಿದ್ದರು ಎಂದರೆ ಸರಿ ಅಲ್ಲ. ಸದರಿ ಮೃತ್ಯುಂಜಯ ಸ್ವಾಮಿಗಳು ಮುಂಡರಗಿಯ ಅನ್ನದಾನೇಶ್ವರ ಸಂಸ್ಥಾನ ಮಠದ ಸ್ವಾಮಿಗಳಿದ್ದರು. ಸದರಿಯವರು ಮೊದಲಿಗೆ ಮಣಕವಾಡದಲ್ಲಿ ಸ್ವಾಮಿಗಳಾಗಿದ್ದ ಕುರಿತು ನನಗೆ ತಿಳಿದಿದೆ. ಮುಂಡರಗಿಯ ಅನ್ನದಾನೇಶ್ವರ ಸಂಸ್ಥಾನ ಮಠಕ್ಕೂ ಮತ್ತು ಮಣಕವಾಡದ ಅನ್ನದಾನೇಶ್ವರ ದೇವಮಂದಿರ ಮಠಕ್ಕೂ ಸಂಬಂಧ ಇಲ್ಲ ಎಂದರೆ ಸರಿ ಅಲ್ಲ. ಸಾಕ್ಷಿಯು ಮುಂದುವರೆದು ಇತ್ತೀಚೆಗೆ ಅನ್ನದಾನೇಶ್ವರ ದೇವಮಂದಿರ ಮಠವನ್ನು ಬೆಳೆಸಿಕೊಂಡಿದ್ದಾರೆ ಅಂತಾ ನುಡಿಯುತ್ತಾರೆ.

2. ಸದರಿ ಮಣಕವಾಡದ ಅನ್ನದಾನೇಶ್ವರ ದೇವಮಂದಿರ ಮಠ ನೂರಾರು ವರ್ಷಗಳ ಹಳೆಯದ್ದು ಎಂದರೆ ಸರಿ. ಅನ್ನದಾನೇಶ್ವರ ದೇವಮಂದಿರ ಮಠ ಮಣಕವಾಡದಲ್ಲಿದೆ ಎಂದರೆ ಸಾಕ್ಷಿಯು ಕೇವಲ ಅನ್ನದಾನೇಶ್ವರ ಮಠ ಅಂತಾ ಇದೆ. ದೇವಮಂದಿರ ಮಠ ಅಂತಾ ಇಲ್ಲ ಅಂತಾ ನುಡಿಯುತ್ತಾರೆ. 3 ನೇ ಪ್ರತಿವಾದಿಯ ಹೆಸರನ್ನು ವಾದ ಪತ್ರದಲ್ಲಿ ನಮೂದಿಸಿರುವುದು ಸರಿ ಇದೆ ಎಂದರೆ ಸರಿ. ಅನ್ನದಾನೇಶ್ವರ ಮಠ ಹಿರೇವಡ್ಡಟ್ಟಿ ಗ್ರಾಮದ ಬಸ್ ನಿಲ್ದಾಣದ ಸಮೀಪ ಇರುವ ಯೂನಿಯನ್ ಬ್ಯಾಂಕ್ ಹತ್ತಿರ ಇದೆ. ಇದನ್ನು ಹೊರತುಪಡಿಸಿ, ದಾವಾ ಆಸ್ತಿಯಲ್ಲಿ ಗುಡಿ ಕಟ್ಟಿರುವ ಮಠ ಇರುವುದಾಗಿ ನುಡಿಯುತ್ತಾರೆ.

3. ಈಗ ನನಗೆ ತೋರಿಸಿದ ಛಾಯಾಚಿತ್ರ ಸದರಿ ಮಠದ್ದು ಇರುತ್ತದೆ . ಸಾಕ್ಷಿಯು ಸದರಿ ಛಾಯಾಚಿತ್ರವನ್ನು ನೋಡಿ ಗುರುತಿಸಿದ್ದರಿಂದ , **ನಿಡಿ 9 ಅಂತಾ ಗುರುತಿಸಲಾಯಿತು.**

4. ಈಗ ನನಗೆ ತೋರಿಸಿದ ಇನ್ನೊಂದು ಛಾಯಾಚಿತ್ರದಲ್ಲಿ ಕಾಣುವ ಪ್ರದೇಶ ಮಠದ ಮುಂದಿನ ಜಾಗ ಇರುತ್ತದೆ. ಸಾಕ್ಷಿಯು ಸದರಿ ಛಾಯಾಚಿತ್ರವನ್ನು ನೋಡಿ ಗುರುತಿಸಿದ್ದರಿಂದ, **ನಿಡಿ 10 ಅಂತಾ ಗುರುತಿಸಲಾಯಿತು.**

5. ಸದರಿ ಮಠ ಮತ್ತು ಖಾಲಿ ಜಾಗ ಎರಡೂ ದಾವಾ ಆಸ್ತಿಯಲ್ಲಿವೆ ಎಂದರೆ ಸಾಕ್ಷಿಯು ಮೊದಲಿಗೆ ನಾವು ಸ್ವಾಧೀನದಲ್ಲಿದ್ದು , ಇತ್ತೀಚೆಗೆ ಮಠ ನಿರ್ಮಿಸಿರುವುದಾಗಿ ನುಡಿಯುತ್ತಾರೆ.

6. ಈಗ ನನಗೆ ತೋರಿಸಿದ ಛಾಯಾಚಿತ್ರದಲ್ಲಿ ಮಠವನ್ನು 1999 ರಲ್ಲಿ ಕಟ್ಟಿಸಿರುವುದಾಗಿ ಕಂಡು ಬರುತ್ತದೆ. ಸಾಕ್ಷಿಯು ಸದರಿ ಛಾಯಾಚಿತ್ರವನ್ನು ನೋಡಿ ಗುರುತಿಸಿದ್ದರಿಂದ, **ನಿಡಿ 11 ಅಂತಾ ಗುರುತಿಸಲಾಯಿತು.**

7. ಸದರಿ ಮಠದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತವೆ ಎಂದರೆ ಸರಿ ಅಲ್ಲ . ಈ ಕುರಿತು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನನ್ನ ಹುಟ್ಟೂರು ಹಿರೇವಡ್ಡಟ್ಟಿ ಇದ್ದು , ಅಲ್ಲಿಯೇ ಇದ್ದೇನೆ ಎಂದರೆ ಸರಿ. ನಮ್ಮ ಮನೆತನದ ಆಗು ಹೋಗುಗಳ ಸಂಪೂರ್ಣ ಮಾಹಿತಿ ನನಗೆ ಇದೆ ಎಂದರೆ ಸರಿ. ಸನ್–1970 ನೇ ಇಸ್ವಿಯಲ್ಲಿ ನನಗೆ ಸುಮಾರು 25–30 ವಯಸ್ಸು ನಡೆಯುತ್ತಿದ್ದವು ಎಂದರೆ ಸರಿ. ನನ್ನ ತಂದೆ ಸದರಿ ದಾವಾ ಆಸ್ತಿಯನ್ನು ದಾನವಾಗಿ ನೀಡುವಾಗ ನೀವು ತಕರಾರು ವ್ಯಕ್ತಪಡಿಸಿದ್ದೀರಾ ಎಂದರೆ ಸಾಕ್ಷಿಯು ನನ್ನ ತಂದೆ ದಾನ ಪತ್ರವನ್ನು ಮಾಡಿಕೊಟ್ಟಿಲ್ಲ ಅಂತಾ ನುಡಿಯುತ್ತಾರೆ . ನನ್ನ ಜಮೀನು ಮುಂಚೆ ಹೇಗಿತ್ತೋ ಹಾಗೇ ಮಾಡಿಕೊಡಬೇಕೆಂದು ದಾವೆ ದಾಖಲಿಸಿದ್ದೇನೆ. ಅಧಿಕಾರಿಗಳು ಮತ್ತು ಊರಿನವರು ಸೇರಿ, ದಾವಾ ಆಸ್ತಿಯನ್ನು ಮಠದ ಹೆಸರಿಗೆ ಮಾಡಿರುತ್ತಾರೆ. ಆಗಿನಿಂದಲೂ ನಾನು ಈ ಕುರಿತು ತಕರಾರು ವ್ಯಕ್ತಪಡಿಸುತ್ತಾ ಬಂದಿರುತ್ತೇನೆ.

8. ನಿಪಿ 1 ಮತ್ತು 2 ರ ಪಹಣಿ ಪತ್ರಿಕೆ ಗಣಕೀಕರಣ ಆದಾಗಿನಿಂದಲೂ ಮಠದ ಹೆಸರಿಗಿದೆ ಎಂದರೆ ಸರಿ. ಸನ್ 1970 ರಿಂದ ದಾವಾ ಆಸ್ತಿಗಳು ಮಠದ ಹೆಸರಿಗಿವೆ ಎಂದರೆ ಸಾಕ್ಷಿಯು 1998–99 ರಿಂದ ಇವೆ ಅಂತಾ ನುಡಿಯುತ್ತಾರೆ. ಈ ಕುರಿತು ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸುತ್ತೇನೆ. ದಿಃ 12.07.2007 ರಂದು ನಿಪಿ 4 ರ ದಾಖಲೆಯನ್ನು ನಾನು ಪಡೆದಿದ್ದೆ ಎಂದರೆ ಸರಿ. ನನಗೆ ತಿಳುವಳಿಕೆ ಬಂದಾಗ, ದಾವಾ ಆಸ್ತಿ ಉಳುಮೆ ಮಾಡುವ ಜಮೀನು ಇದ್ದು ಹಾಗೂ ನಮ್ಮ ಹಿರಿಯರು ಸ್ಮಶಾನಕ್ಕೆ ಸ್ವಲ್ಪ ಜಾಗ ನೀಡಿದ್ದರು. ಆದರೆ, ಈಗ ಅದು ಇಲ್ಲ. ದಸರಾ ಹಬ್ಬದ ಪ್ರಯುಕ್ತ ಸದರಿ ದಾವಾ ಆಸ್ತಿಯಲ್ಲಿ ಬನ್ನಿ ಮುರಿಯುತ್ತಾರೆ ಎಂದರೆ ಸರಿ ಅಲ್ಲ. ಸದರಿ ದಾವಾ ಆಸ್ತಿಯಲ್ಲಿ ಉಗ್ರಾಣ ಮತ್ತು ಸಮುದಾಯ ಭವನ ಇದ್ದು , ಈಗ ಕೆಡವಲಾಗಿವೆ. ಸದರಿ ಕೆಡವಿದ ಜಾಗದಲ್ಲಿಯೇ ಗುರು ಭವನ ನಿರ್ಮಿಸುತ್ತಿದ್ದಾರೆ ಎಂದರೆ ಸಾಕ್ಷಿಯು ರಿ ಸ ನಂ.551 ರಲ್ಲಿ ನಿರ್ಮಿಸುತ್ತಿದ್ದಾರೆ ಅಂತಾ ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿಯೇ ಸದರಿ ಗ್ರಾಮಸ್ಥರು ಅಯ್ಯಪ್ಪ ಸ್ವಾಮಿಯ ವ್ರತ ಮಾಡುತ್ತಾರೆ ಎಂದರೆ ಸರಿ ಅಲ್ಲ. ಸಾಕ್ಷಿಯು ಮುಂದುವರೆದು ಮೊದಲಿಗೆ 2–3 ವರ್ಷ ಮಾತ್ರ ಮಾಡಿದ್ದರು ಅಂತಾ ನುಡಿಯುತ್ತಾರೆ. ನನ್ನ ತಂದೆ ಊರಿನ ಹಿರಿಯರು ಮತ್ತು ಪ್ರಜ್ಞಾವಂತರಿದ್ದು, ಎಲ್ಲ ವ್ಯವಹಾರಗಳನ್ನು ತಿಳಿದುಕೊಂಡು ಮಾಡುತ್ತಿದ್ದರು ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ

ಮುಂಡರಗಿ.